

# ವಡೋದರಾದ ಸುತ್ತಮುತ್ತ

ಸಬರಮತಿ ಆಶ್ರಮ ಮತ್ತು ಸರ್ದಾರ್ ಸರೋವರ ಅಣೆಕಟ್ಟು ಎರಡೂ ಸಮಕಾಲೀನ ಇತಿಹಾಸಕ್ಕೆ ಸಲ್ಲುವಂತಿವೆ. ವಡೋದರದ ಸುತ್ತ ಮುತ್ತ ನೋಡುವ ಸ್ಥಳಗಳು ನೂರೆಂಟಿವೆ.

■ ಚಿತ್ರ-ಲೇಖನ:
**ಶ್ಯಾಮಲಾ ಮಾಧವ್**

**ಮುಂ**ಬೈಯಿಂದ ಅಪರಾಹ್ನ 1.40ರ ಕರ್ಣಾವತಿ ಎಕ್ಸ್‌ಪ್ರೆಸ್‌ನಲ್ಲಿ ಹೊರಟು ವಾಪಿ, ವಲ್ಸಾಡ್, ಸೂರತ್‌ಗಳಲ್ಲಿ ನಿಮಿಷಗಳ ಕಾಲ ನಿಂತು ಸಾಗಿ ವಡೋದರಾ ತಲುಪಿದಾಗ ರಾತ್ರಿ ಏಳೂ ನಲ್ವತ್ತು. ಸೂರತ್ ಸಮೀಪಿಸಿದಾಗ ತಪ್ತಿ ನದಿಯೂ, ಭರೂಚ್ ಸಮೀಪಿಸುವಾಗ ನರ್ಮದಾ ನದಿಯೂ, ವಡೋದರಾ ಸಮೀಪಿಸುವಾಗ ವಿಶ್ವಾಮಿತ್ರಿ ನದಿಯೂ; ನಡುವೆ ಸಾಕಷ್ಟು ಹೊಲ, ಗದ್ದೆಗಳೂ ಕಣ್ಣಿಗೆ ಬಿದ್ದಿದ್ದವು.

ವಡೋದರಾದಲ್ಲಿ ಇಳಿದಾಗಲೇ ಬಂಧು, ಗೆಳತಿ ದಯಾ ಪ್ರತ್ಯಕ್ಷಳಾಗಿದ್ದಳು. ಜಗನ್ನಾಥಪುರದ ಅವರ ಮನೆಗುಂಟದ ಹಾದಿಯುದ್ದಕ್ಕೂ ಪಕ್ಕದಲ್ಲಿ ಸಾವಿರಾರು ಎಕರೆಗಳ ವಿಸ್ತಾರದ ಅರಮನೆ ಭೂಮಿ, ಮಹಾದ್ವಾರ ಹಾಗೂ ದೂರದಲ್ಲಿ ಗೋಚರಿಸಿದ ಅರಮನೆ ಮಬ್ಬುಗತ್ತಲಲ್ಲಿ ಭ್ರಮಾಲೋಕದಂತಿತ್ತು.

ತಮ್ಮ ಸತೀಶ್ ಹಾಗೂ ದಯಾ, ಮೂರು ದಿನಗಳ ನಮ್ಮ ಭೇಟಿಯಲ್ಲಿ ಶಕ್ಯವಿರುವಷ್ಟನ್ನೂ ತೋರುವಂತೆ ಎಲ್ಲವನ್ನೂ ನಿಯೋಜಿಸಿಕೊಂಡಿದ್ದರು. ಅಹಮದಾಬಾದ್‌ಗೆ ಹೊರಟು ನಿಂತು, ಮನೆಯ ಒತ್ತಿನಲ್ಲಿದ್ದ ರಾಜಮನೆತನಕ್ಕೆ ಸೇರಿದ ಜಗನ್ನಾಥ ಮಂದಿರಕ್ಕೆ ಭೇಟಿಯೇ ಪ್ರಥಮ ದರ್ಶನ. ಪುರಿ ಜಗನ್ನಾಥನ ಶೈಲಿಯ ಪುಟ್ಟ ಮಂದಿರದೊಳಗೆ ಜಗನ್ನಾಥ, ಸುಭದ್ರೆ, ಬಲಭದ್ರರ ಮೂರ್ತಿ, ಮರಗಳ ತಣ್ಪಿನ ಪ್ರಶಾಂತ ಆವರಣ. ಅಲ್ಲಿಂದ ಹೊರಟು ಸಾಗಿದ ರಾಜರಸ್ತೆ ಎಕ್ಸ್‌ಪ್ರೆಸ್ ವೇ. ಏರುತಗ್ಗಿಲ್ಲದ ಸಮತಟ್ಟಾದ ಭೂಮಿಯಲ್ಲಿ ಹಾದ ಸುವಿಶಾಲ, ಸುಭದ್ರ, ಸುಂದರ ಪಥ. ಇಕ್ಕೆಲಗಳಲ್ಲೂ ಕಣ್ಣು ಹಾಯುವಷ್ಟು ದೂರ, ಹಸಿರಿನಿಂದ ನಳನಳಿಸುವ ಹೊಲ ಗದ್ದೆಗಳು; ಜೋಳ, ಕಬ್ಬು, ಹತ್ತಿ, ಸಾಸಿವೆ, ವಿಧವಿಧ ತರಕಾರಿ, ಸೂರ್ಯಕಾಂತಿಯ ಹೊಲಗಳು ಹಣ್ಣಿನ ತೋಟಗಳು. ನಡುವೆ ಹರಿವ ಕಾಲುವೆಗಳು; ಹೊಲಗಳಲ್ಲಿ ಕೊಕ್ಕರೆಗಳು; ಹುಲ್ಲುಗಾವಲಲ್ಲಿ ದನ, ಕುರಿ, ಆಡುಗಳ ಹಿಂಡು. ರಸ್ತೆ ವಿಭಜಕದಲ್ಲಿ ಕಂಗೊಳಿಸುವ ಹೂಗಿಡಗಳು. ಈ ರಾಜ್ಯ ಇಷ್ಟು ಹಸಿರಾಗಿದೆಯೇ ಎಂದೂ ಅಚ್ಚರಿಯಾಯಿತು.

ರಾಜಧಾನಿ ಗಾಂಧಿನಗರವನ್ನು ಪ್ರವೇಶಿಸಿ ಭೇಟಿ ಇತ್ತದ್ದು ಅಕ್ಷರಧಾಮಕ್ಕೆ. ಅಕ್ಷರಧಾಮ ಈಗ ಕಟ್ಟೆಚ್ಚರದ ಬಿಗು ಪಹರೆಯ ತಾಣ. ಕ್ಯಾಮೆರಾಗಳಿಗೆ ಒಳಗೆ ಪ್ರವೇಶವಿಲ್ಲ. ಅಂದು ಆಘಾತಿಸಲ್ಪಟ್ಟ ಈ ತಾಣದಲ್ಲಿ ಇಂದಿಗೂ ದುರಸ್ತಿ ಕಾರ್ಯ ನಡೆಯುತ್ತಿರುವುದರಿಂದ ಎಲ್ಲ ಧೂಳುಮಯ. ಮೇಲ್ಮಹಡಿಗಳಲ್ಲಿ ಸ್ವಾಮಿ ನಾರಾಯಣರ ಜೀವನ ಚಿತ್ರಣ ಬಲು ಆಕರ್ಷಕ. ಬೋಧಪ್ರದವಾಗಿತ್ತು. ಆಕರ್ಷಕ